# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 162 | Pages. 2 | Date: 01-05-2025, THURSDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 162 - ಪುಟಗಳು : 2 - 01 ಮೇ 2025 ಗುರುವಾರ Ph: 8762954248 ದರ : ₹1


# ಹಾಸನ ಇನ್ಮುಂದೆ ಮಹಾನಗರ ಪಾಲಿಕೆ!

## ಅಧಿಕೃತ ಅಧಿಸೂಚನೆ ಪ್ರಕಟ | ದಶಕಗಳ ಕನಸು ನನಸು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ಅಧಿಕೃತ ಘೋಷಣೆ ಮಾಡಲಾಗಿದ್ದು, ದಶಕಗಳ ಕನಸು ಕೊನೆಗೂ ಈಡೇರಿದೆ.

ಏ. 29 ರಂದು ರಾಜ್ಯಪಾಲರ ಅಂಕಿತದೊಂದಿಗೆ ನಗರಾಭಿವೃದ್ಧಿ ಇಲಾಖೆಯಿಂದ ರಾಜ್ಯಪತ್ರದಲ್ಲಿ ಅಧಿಕೃತ ಅಧಿಸೂಚನೆ ಹೊರಡಿಸಲಾಗಿದೆ. ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ, ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದರು. ಅದಾದ ಬಳಿಕ ರಾಜ್ಯ ಸಚಿವ ಸಂಪುಟ ಸಭೆಯಲ್ಲೂ ನಿರ್ಣಯ ಕೈಗೊಳ್ಳಲಾಗಿತ್ತು.

ಇನ್ನು ಮುಂದೆ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ರ ಸೆಕ್ಷನ್-3, 4, 500, 5001 ಮತ್ತು 503ನೇ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಹಾಸನ ಮಹಾನಗರ ಪಾಲಿಕೆ ಪ್ರದೇಶವೆಂದು ಪದನಾಮೀಕರಿಸಿ ಉದ್ಘೋಷಿಸಲಾಗಿದೆ.

ಜನಸಂಖ್ಯೆ, ಜನಸಾಂದ್ರತೆ, ವಾರ್ಷಿಕ ಆದಾಯ ಮತ್ತು ಕೃಷಿಯೇತರ ಉದ್ಯೋಗದ ಆಧಾರದ ಮೇಲೆ ದೊಡ್ಡ ನಗರ ಪ್ರದೇಶದ ಮಾನದಂಡಗಳನ್ನು ನಗರಸಭೆ ಪೂರೈಸಿದ ಹಿನ್ನೆಲೆಯಲ್ಲಿ ಈ ಉನ್ನತೀಕರಣ ಮಾಡಲಾಗಿದೆ.

ಈ ಹಿಂದೆ ಅಧಿಸೂಚನೆ ಪ್ರಕಟಿಸಿದ ದಿನಾಂಕದಿಂದ 30 ದಿನಗಳ ಒಳಗೆ ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ನಿಗದಿತ ಅವಧಿಯಲ್ಲಿ ಸ್ವೀಕೃತವಾದ ಆಕ್ಷೇಪಣೆ/ಸಲಹೆ ಪರಿಶೀಲಿಸಿದ ನಂತರ ಅಂತಿಮ ಅಧಿಸೂಚನೆ ಪ್ರಕಟಿಸಲಾಗಿದೆ. ಇದರಿಂದ ಹಲವು ರೀತಿಯ ಅಭಿವೃದ್ಧಿಯ ಕನಸು ಚಿಗುರಿದೆ.




ಹಾಸನ ಮಹಾನಗರ ಪಾಲಿಕೆಯನ್ನು ಅಧಿಕೃತಗೊಳಿಸಿರುವುದು ಸಂತಸದ ವಿಷಯ. ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಾಸನ ಜನತೆಗೆ ಭರವಸೆ ನೀಡಿದಂತೆ ನಡೆದುಕೊಂಡಿದೆ. ಇದಕ್ಕಾಗಿ ಸಿಎಂ, ಡಿಸಿಎಂ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಧನ್ಯವಾದ ಹೇಳುವೆ. ಮುಂದಿನ ದಿನಗಳಲ್ಲಿ ಮಹಾನಗರ ಪಾಲಿಕೆಗೆ ಹೆಚ್ಚಿನ ಅನುದಾನ ಬಂದು, ಅಭಿವೃದ್ಧಿಯೂ ಆಗಲಿದೆ.

**- ಶ್ರೇಯಸ್ ಪಟೇಲ್, ಸಂಸದ**

### ಅವಿಶ್ವಾಸ ಗೆದ್ದ ಚಂದ್ರೇಗೌಡ ಮೇಯರ್?

ಏ. 28 ರಂದು ತಮ್ಮ ವಿರುದ್ಧ ಮಂಡಿಸಿದ್ದ ಅವಿಶ್ವಾಸ ನಿರ್ಣಯದಲ್ಲಿ ಗೆಲುವು ಸಾಧಿಸಿ ಅಧ್ಯಕ್ಷ ಸ್ಥಾನ ಉಳಿಸಿಕೊಂಡ ಎಂ.ಚಂದ್ರೇಗೌಡ ಅವರೇ ಮೊದಲ ಮೇಯರ್ ಎಂಬ ಹಿರಿಮೆಗೆ ಪಾತ್ರರಾಗಲಿದ್ದಾರೆ. ನಾನೇ ಮೇಯರ್ ಪದನಾಮಕ್ಕೆ ಭಾಜನನಾಗಬಹುದು ಎಂಬ ಬಗ್ಗೆ ಅಧಿಕೃತವಾಗಿ ಮಾಹಿತಿ ಬಂದಿಲ್ಲ. ಹೌದಾದರೆ ಸಂತೋಷದಿಂದ ಆ ಹುದ್ದೆ ಅಲಂಕರಿಸಿ ಮಹಾನಗರ ಪಾಲಿಕೆ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದಾಗಿ ಚಂದ್ರೇಗೌಡ ಹೇಳಿದ್ದಾರೆ.

### ಪೂರಕವಾದ ಅಂಶಗಳು


ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ಘೋಷಿಸಲು ಕೆಲವು ನಿಬಂಧನೆಗಳಿದ್ದವು. ಅದೆಲ್ಲವನ್ನೂ ಪರಿಗಣಿಸಿ ಈ ಆದೇಶ ಹೊರಡಿಸಲಾಗಿದೆ. ನಗರಸಭೆ ಜನಸಂಖ್ಯೆ 3 ಲಕ್ಷಕ್ಕಿಂತ ಕಡಿಮೆ ಇರಬಾರದು. ಜನ ಸಾಂದ್ರತೆ 1 ಚದರ ಕಿ.ಮೀ. ಪ್ರದೇಶಕ್ಕೆ 3, ವಿವಿಧ ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ 6 ಕೋಟಿ ಇರಬೇಕು. ಒಬ್ಬರ ವಾರ್ಷಿಕ ಆದಾಯ 200 ರೂ. ಇರಬೇಕು ಹಾಗು ಶೇ. 50ಕ್ಕಿಂತ ಕಡಿಮೆ ಉದ್ಯೋಗ ಇರಬಾರದು ಎಂಬ ನಿಯಮಗಳಿವೆ.

### 30 ಕೋಟಿ ರೂ. ಅನುದಾನ ಕೋರಿಕೆ

ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 25 ಗ್ರಾಮಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ವಿಶೇಷ ಅನುದಾನದಡಿ 30 ಕೋಟಿ ರೂ. ಬಿಡುಗಡೆ ಮಾಡಲು ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸುವಂತೆ ಪೌರಾಡಳಿತ ಇಲಾಖೆ ಜಿಲ್ಲಾಧಿಕಾರಿಗೆ ಕೋರಿದೆ.

ಈ ಗ್ರಾಮಗಳಿಗೆ ವಿವಿಧ ಮೂಲ ಸೌಕರ್ಯಗಳ ಅಗತ್ಯ ಇರುವುದರಿಂದ ವಿಶೇಷ ಅನುದಾನದಡಿ 30 ಕೋಟಿ ರೂ. ಬಿಡುಗಡೆ ಮಾಡಿಸಿಕೊಡುವಂತೆ ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡರಿಗೆ ಪತ್ರ ಬರೆದಿದ್ದರು. ಈ ಪತ್ರ ಆಧರಿಸಿ ದೇವೇಗೌಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು. ಇವುಗಳನ್ನು ಪರಿಶೀಲಿಸಿ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರಿಗೆ ಪತ್ರ ಬರೆದಿದ್ದು ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿದ್ದರು. ಈ ಕುರಿತು ನಗರಸಭೆ ಪೌರಾಯುಕ್ತರಿಗೆ ನಿರ್ದೇಶನ ನೀಡಿರುವ ಜಿಲ್ಲಾಧಿಕಾರಿ ಸತ್ಯಭಾಮಾ 25 ಗ್ರಾಮಗಳ ವಾರ್ಡ್‌ಗಳ ಅಭಿವೃದ್ಧಿಗೆ 30 ಕೋಟಿ ರೂ. ಮಂಜೂರು ಮಾಡುವ ಬಗ್ಗೆ ನಿಯಮಾನುಸಾರ ಅವಶ್ಯಕ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿದ್ದಾರೆ.

## ಬಾಳ್ಳುಪೇಟೆ ಗ್ರಾಪಂನಲ್ಲಿ ಬಸವ ಜಯಂತಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬಾಳ್ಳುಪೇಟೆ: ಇಲ್ಲಿನ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ವಿಶ್ವಗುರು ಬಸವಣ್ಣ ಅವರ ಜಯಂತಿಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಾಂತಾ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಇದೆ ವೇಳೆ ರಾಷ್ಟ್ರೀಯ ಪಂಚಾಯತ್ ರಾಜ್ ದಿನ ಪ್ರಯುಕ್ತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ, ವಾಣಿಜ್ಯ ಮಳಿಗೆಗಳು, ಹೋಟೆಲ್ ಗಳಿಂದ ಹಸಿ ಕಸ ಮತ್ತು ಒಣ ಕಸ ವಿಂಗಡಿಸಿ ಗ್ರಾಮ ಪಂಚಾಯಿತಿಯ ಕಸ ವಿಲೇವಾರಿ ವಾಹನಕ್ಕೆ ನೀಡಲು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

ಸಾಂಕೇತಿಕವಾಗಿ ಬಿ.ಜಿ. ಗುರಪ್ಪವೃತ್ತ ಅಂಗಡಿ ಹೋಟೆಲ್ ಬೇಕರಿಗಳಿಗೆ ಭೇಟಿ ನೀಡಿ ಪ್ರತಿನಿತ್ಯ ಸಾರ್ವಜನಿಕರು ಹಸಿ ಕಸ ಮತ್ತು ಒಣ ಕಸವನ್ನು ವಿಂಗಡಿಸಿ ಗ್ರಾಮದ ಸ್ವಚ್ಛತೆಗೆ ಸಹಕರಿಸಬೇಕು. ಸ್ವಚ್ಛ ಪರಿಸರ ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕೆಂದು ಜಾಗೃತಿ ಮೂಡಿಸಲಾಯಿತು. ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿ ಸಾರ್ವಜನಿಕರು ಸ್ವಚ್ಛ ಬಾಳ್ಳುಪೇಟೆ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಗ್ರಾಮ ಪಂಚಾಯಿತಿಯ ಆಡಳಿತ ವರ್ಗ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹರೀಶ್, ಕಾರ್ಯದರ್ಶಿ ಮತ್ತು ಸಿಬ್ಬಂದಿ ಹಾಜರಿದ್ದರು.

## ಯುದ್ಧ ಘೋಷಣೆ ದೊಡ್ಡವರಿಗೆ ಬಿಟ್ಟಿದ್ದು



ಅರಸೀಕೆರೆ: ಪಹಲ್ಗಾಮ್ ನರಮೇಧ ಖಂಡಿಸಿ ಪಾಕಿಸ್ತಾನದ ವಿರುದ್ಧ ಯುದ್ಧ ಘೋಷಿಸುವುದು ಬಿಡುವುದು ದೊಡ್ಡವರಿಗೆ ಬಿಟ್ಟ ವಿಚಾರ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ಜಾತಿ, ಧರ್ಮದ ಆಧಾರದಲ್ಲಿ ನಡೆಯುವ ಅಮಾನುಷ ಕೃತ್ಯಗಳಿಗೆ ಕಡಿವಾಣ ಹಾಕಬೇಕು. ಮನುಕುಲ ಎಚ್ಚೆತ್ತುಕೊಂಡು ಒಂದಾಗಿ ಬಾಳಬೇಕು. ಪಹಲ್ಗಾಮ್ ಘಟನೆ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಮಾನವ, ಮಾನವನಾಗಿ ಬದುಕಬೇಕು. ಮಾನವೀಯ ಗುಣಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಜಾತಿ ವ್ಯವಸ್ಥೆ ತಾಂಡವ ಆಡಬಾರದು ಎಂದರು. ಪಾಕಿಸ್ತಾನದ ಮೇಲೆ ಯುದ್ಧ ಮಾಡುವುದು ಅಥವಾ ಬಿಡುವುದು ದೊಡ್ಡವರಿಗೆ ಬಿಟ್ಟ ವಿಚಾರ. ಅದರ ಬಗ್ಗೆ ಪ್ರಧಾನಿ ಹಾಗು ಮುಖ್ಯಮಂತ್ರಿ ಮಾತನಾಡುತ್ತಾರೆ. ಒಳ್ಳೆಯ ತೀರ್ಮಾನ ತೆಗೆದುಕೊಂಡರೆ ಜನರು ಜೈ ಎನ್ನುತ್ತಾರೆ ಇಲ್ಲದಿದ್ದರೆ ಮನಸ್ಸಿನಲ್ಲೇ ಕೊರಗುತ್ತಾರೆ. ಇಂತಹ ಘಟನೆಗಳು ಮರುಕಳಿಸದೆ ಎಲ್ಲರೂ ಶಾಂತ ಜೀವನ ನಡೆಸುವಂತಾಗಬೇಕು ಎಂದರು.

## ವಕ್ಫ್ ಮಸೂದೆ ವಿರೋಧಿಸಿ ಮೇ 3ಕ್ಕೆ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಕ್ಫ್ ಮಸೂದೆ-2025 ಅಸಂವಿಧಾನಿಕ, ಅವೈಜ್ಞಾನಿಕ ಮತ್ತು ಮುಸ್ಲಿಮರ ವಿರೋಧಿಯಾಗಿದ್ದು, ಇದನ್ನು ಖಂಡಿಸಿ ಮೇ 3ರ ರಂದು ಬೆಳಿಗ್ಗೆ 10ಕ್ಕೆ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಮುಸ್ಲಿಂ ಸಂಘಟನೆಗಳ ಒಕ್ಕೂಟದ ಅಮೀರ್ ಜಾನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರ ದೇಶದಲ್ಲಿ ಶಿಕ್ಷಣ, ನಿರುದ್ಯೋಗ, ಆರೋಗ್ಯ, ಮೂಲಭೂತ ಸೌಕರ್ಯ ನೀಡುವಲ್ಲಿ ವಿಫಲವಾಗಿದೆ. ಇದನ್ನು ಮರೆಮಾಚುವುದಕ್ಕೆ ಮುಸ್ಲಿಮರ ವಿರುದ್ಧ ಕ್ರಮೇಣವಾಗಿ ಕಪ್ಪು ಕಾಯಿದೆ ತಂದು ದ್ವೇಷದ ರಾಜಕೀಯ ಮಾಡುತ್ತಿದೆ ಎಂದರು. ಆದರೆ ಈ ದೇಶದ ಜನರು ಇದನ್ನು ಒಪ್ಪುವುದಿಲ್ಲ. ಇದರ ಭಾಗವಾಗಿ




ಮುಸ್ಲಿಮರು ಒಪ್ಪದ ವಕ್ಫ್ ಮಸೂದೆ -2025 ನ್ನು ವಿರೋಧ ಪಕ್ಷಗಳ ವಿರೋಧ ವಿದ್ದರೂ ಕೇವಲ ಸಂಸತ್ತಿನಲ್ಲಿ

ಅಂಕಿ ಅಂಶಗಳ ಮೂಲಕ ಜಾರಿಗೆ ತಂದಿದೆ. ಈಗಾಗಲೇ ಮಸೂದೆ ವಿರೋಧಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಹಲವು ಪ್ರಕರಣ ದಾಖಲಿಸಲಾಗಿದೆ ಎಂದರು. ಹಿಂದೂ, ಕ್ರೈಸ್ತ, ಗುರುದ್ವಾರಗಳಲ್ಲಿ ಇತರ ಧರ್ಮೀಯರಿಗೆ ಇಲ್ಲದ ಅವಕಾಶ ಮುಸ್ಲಿಮರ ಧಾರ್ಮಿಕ ಸಂಸ್ಥೆಗಳಲ್ಲಿ ಯಾಕೆ ಬೇಕು, ಇದು ದ್ವೇಷ ರಾಜಕೀಯವಲ್ಲವೇ, ಹೊಸ ಕಾನೂನಿನಲ್ಲಿವಕ್ಫ್ ಸಮಿತಿಗಳಲ್ಲಿ ಮುಸ್ಲಿಂಮೇತರರಿಗೆ ಸೇರಿಸಲು ಅವಕಾಶ, ವಕ್ಫ್ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡುವುದು, ಇನ್ನು ಅನೇಕ ಹೊಸ ನೀತಿಗಳನ್ನು ಜಾರಿ ಮಾಡಿರುವುದು ಮುಸ್ಲಿಮರ ವಿರುದ್ಧವಾಗಿದ್ದು, ಹೊಸ ನೀತಿಗಳನ್ನು ಒಪ್ಪುವುದಿಲ್ಲ ಎಂದರು.

ಬಿಜೆಪಿ ಕ್ರಮೇಣವಾಗಿ ಮುಸ್ಲಿಮರ ವಿರುದ್ಧ ಕರಾಳ ಕಾನೂನು ತರುತ್ತಿದ್ದು, ಇದು ಒಂದು ಕರಾಳ ಕಾನೂನಿನ ಭಾಗವಾಗಿದೆ. ಆದ್ದರಿಂದ ಈ ದೇಶದ 20 ಕೋಟಿ ಮುಸ್ಲಿಮರು ಯಾವುದೇ ಕಾರಣಕ್ಕೂ ಒಪ್ಪದೇ ಈ ಕಾನೂನು ಹಿಂಪಡೆಯುವರೆಗೂ ಹೋರಾಟ ಮುಂದುವರೆಸುತ್ತೇವೆ ಎಂದು ಎಚ್ಚರಿಸಿದರು.

# ಜಿಲ್ಲಾದ್ಯಂತ ವಿಶ್ವಗುರು ಬಸವ ನಾಮ ಸ್ಮರಣೆ

## ಅದ್ದೂರಿ ಮೆರವಣಿಗೆ, ಧಾರ್ಮಿಕ ಕೈಂಕರ್ಯ | ಬಸವ ತತ್ತ್ವ ಪಾಲಿಸುವಂತೆ ಗಣ್ಯರ ಕರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧೆಡೆ ಬುಧವಾರ ವಿಶ್ವಗುರು ಬಸವಣ್ಣ ಅವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಿಗ್ಗೆಯಿಂದಲೇ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕೈಂಕರ್ಯ, ಅದ್ದೂರಿ ಮೆರವಣಿಗೆ, ಉಪನ್ಯಾಸ ಕಾರ್ಯಕ್ರಮಗಳು ನಡೆದವು. ಅರಸೀಕೆರೆ, ಹಾಸನದ ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸವ ಅನುಯಾಯಿಗಳು ಭಾಗವಹಿಸಿದ್ದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ಅನುಭವ ಮಂಟಪದ ಮೂಲಕ ಜಾತಿಯತೆಯನ್ನು ತೊಡೆದು ಹಾಕಲು ಯತ್ನಿಸಿದರು. ಆದರೆ ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗು ಇಂದಿಗೂ ಮುಂದುವರೆದಿದೆ ಎಂದು ಹೇಳಿದರು.

ಅನುಭವ ಮಂಟಪದ ಮೂಲಕ ಸರ್ವರಿಗೂ ಸಮಾನ ಅವಕಾಶ ಕಲ್ಪಿಸಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಸವಣ್ಣ ನಾಂದಿ ಹಾಡಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲೇ ಲೋಕಸಭೆ ಹಾಗೂ ವಿಧಾನಸಭೆಗಳು ರಚನೆಯಾಗಿವೆಯಾದರೂ ರಾಜಕಾರಣಿಗಳು ಮಾತ್ರ ಜಾತಿ ಗುಂಗಿನಿಂದ ಹೊರಗೆಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಸವೇಶ್ವರ, ಬುದ್ಧ, ಅಂಬೇಡ್ಕರ್, ಕನಕದಾಸ ಸೇರಿ ಎಲ್ಲರನ್ನೂ ನಾವು ಒಂದು ದಿನದ ಆಚರಣೆಗೆ ಸೀಮಿತರನ್ನಾಗಿಸಿದ್ದೇವೆ. ಬಸವಣ್ಣ ಅವರು ಕಾಯಕವೇ ಕೈಲಾಸ, ದಯವೇ ಧರ್ಮ, ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ. ಸಕಲ ಜೀವಾತ್ಮರಿಗೂ ಒಳಿತು ಬಯಸೋಣ ಎಂಬ ಸಂದೇಶ ಸಾರಿದರು. ಆದರೆ ಪ್ರಸ್ತುತ ದಿನಗಳಲ್ಲಿ ಎಲ್ಲವೂ ವ್ಯತಿರಿಕ್ತವಾಗಿದೆ. ಧರ್ಮದ ಆಧಾರದಲ್ಲಿ ದೇಶ ಹಾಗು ಏಕತೆಯನ್ನು ಒಡೆಯುವ ಕೆಲಸಗಳಾಗುತ್ತಿವೆ. ಒಂದು ವರ್ಷದಲ್ಲಿ ದಾರ್ಶನಿಕರ ಆಚರಣೆ ನೆಪದಲ್ಲಿ ಕನಿಷ್ಠ 40 ಸರ್ಕಾರಿ ರಜೆಗಳು ಸಿಗುತ್ತವೆ. ಆದರೆ ಯಾವ ನೌಕರರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತತ್ವಾದರ್ಶಗಳನ್ನು ಅಳವಡಿಸಿಕೊಳ್ಳುವುದಿಲ್ಲ ಎಂದರು.

ಸಂಸದ ಶ್ರೇಯಸ್ ಪಟೇಲ ಮಾತನಾಡಿ, ಸಮಾನತೆ ಸಂದೇಶ ಸಾರಿದ ಬಸವಣ್ಣ ಪ್ರಪಂಚಕ್ಕೆ ಮಾದರಿಯಾಗಿದ್ದಾರೆ. ಮಹನೀಯರನ್ನು ಒಂದು ಸಮಾಜಕ್ಕೆ ಸೀಮಿತರಾಗಿಸುವುದು ಬೇಡ. ಬಸವೇಶ್ವರರ ಕಾಯಕ ತತ್ವವನ್ನು ಭವಿಷ್ಯದ ಪೀಳಿಗೆಗೆ ತಿಳಿಸುವ ಕೆಲಸವಾಗಬೇಕು ಎಂದರು.




ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ, ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿದರು. ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಉಪನ್ಯಾಸ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜಿತಾ, ತಹಶೀಲ್ದಾರ್ ಗೀತಾ, ಅಖಿಲ ಭಾರತ ಲಿಂಗಾಯತ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಐಸಾಮಿಗೌಡ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಪಾಟೀಲ್, ಸರ್ಕಾರಿ ನೌಕರರ ಸಂಘದ ಜಿಲ್ಲಾ ಖಜಾಂಚಿ ಕೆ.ಆರ್. ಹೇಮಂತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ. ತಾರಾನಾಥ್ ಮತ್ತಿತರರಿದ್ದರು.

ಅರಸೀಕೆರೆ ವರದಿ: ಜಗಜ್ಯೋತಿ ಬಸವೇಶ್ವರರ ಜಯಂತ್ಯುತ್ಸವ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಬಸವ ಅನುಯಾಯಿಗಳು ನಗರದ ಎಪಿಎಂಸಿ ಆವರಣದಿಂದ ಬಸವಣ್ಣನ ಭಾವಚಿತ್ರ ಹಿಡಿದು ಮೆರವಣಿಗೆ ಹೊರಟು ಸರ್ಕಾರಿ ಹಿರಿಯ ಹಳೇ ಮಾಧ್ಯಮಿಕ ಪಾಠಶಾಲಾ ಆವರಣದವರೆಗೂ ಸಾಗಿದರು.

ಮೆರವಣಿಗೆ ನೂರಾರು ಎತ್ತುಗಳಿಗೆ ವಿಶೇಷ ರೀತಿಯಲ್ಲಿ ಅಲಂಕಾರ ಮಾಡಿಕೊಂಡು ರೈತರು ಕರೆ ತಂದಿದ್ದರು. ನೂರಾರು ಜೋಡಿ ಎತ್ತುಗಳ ಜೊತೆಗೆ ಮಂಗಳವಾದ್ಯ, ಹತ್ತಾರು ಜಾನಪದ ಕಲಾತಂಡಗಳ ಕಲಾವಿದರು ತಮ್ಮ ಕಲಾ ಪ್ರದರ್ಶನ ನೀಡುತ್ತಲೇ ಮೆರವಣಿಗೆಯಲ್ಲಿ ಸಾಗಿದ್ದು ಮೆರವಣಿಗೆಯ ರಂಗು ಹೆಚ್ಚಿಸಿತು.

ಎತ್ತುಗಳಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸುವ ಮೂಲಕ ಕೆ.ಎಂ. ಶಿವಲಿಂಗೇಗೌಡ ಮೆರವಣಿಗೆಗೆ ಚಾಲನೆ ನೀಡಿದರು. ತಹಶೀಲ್ದಾರ್ ಸಂತೋಷ್ ಕುಮಾರ್, ನಗರಸಭೆ ಅಧ್ಯಕ್ಷ ಎಂ.ಸಮೀವುಲ್ಲಾ, ಉಪಾಧ್ಯಕ್ಷ ಮನೋಹರ್ ಮೆಸ್ತ್ರಿ, ನಗರ ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಮತ್ತಿತರರಿದ್ದರು.

ಭವ್ಯ ಮೆರವಣಿಗೆ: ವೀರಶೈವ ಸಮಾಜದಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಬಸವಣ್ಣ ಅವರ ಭಾವಚಿತ್ರದೊಂದಿಗೆ ಭವ್ಯ ಮೆರವಣಿಗೆ ನಡೆಸಲಾಯಿತು. ಸಹಸ್ರಾರು ಬಸವ ಅನುಯಾಯಿಗಳು ಪಾಲ್ಗೊಂಡಿದ್ದರು. ಮೆರವಣಿಗೆಯಲ್ಲಿ




ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ಗಮನ ಸೆಳೆದರೆ ನಗರದ ಪ್ರಮುಖ ವೃತ್ತಗಳಲ್ಲಿ ಸಿಡಿಸಿದ ಮದ್ದು ಗುಂಡುಗಳ ಪ್ರದರ್ಶನ ನೋಡುಗರನ್ನು ರೋಮಾಂಚನಗೊಳಿಸಿತು.

ಸಕಲೇಶಪುರ ವರದಿ: ಜಾತಿ ತಾರತಮ್ಯ, ಸ್ತ್ರೀ ಶೋಷಣೆ ವಿರುದ್ಧ ಹೋರಾಡಿದ ಭಕ್ತಿ ಭಂಡಾರಿ ಬಸವಣ್ಣ ಸಮ ಸಮಾಜಕ್ಕಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದಾರೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ತಾಲ್ಲೂಕು ಆಡಳಿತ ಭವನ ಆವರಣದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಉದ್ಘಾಟಿಸಿ ಮಾತನಾಡಿ, ಬಸವಣ್ಣನವರು ನೀಡಿದ ಸಮಾಜ ಸುಧಾರಣಾ ಸಂದೇಶಗಳು ಎಂದೆಂದಿಗೂ ಪ್ರಸ್ತುತ. ಎಲ್ಲರಿಗೂ ಸಮಾನ ಅವಕಾಶ, ಜಾತಿ ಪದ್ಧತಿ ಅಳಿವು, ಶ್ರಮಕ್ಕೆ ಮೌಲ್ಯ ನೀಡುವ ಬಸವ ತತ್ವಗಳು ಯುವ ಪೀಳಿಗೆಗೆ ದಿಕ್ಕು ತೋರಿಸುತ್ತವೆ.. ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳುವಳಿಯಾಗಿ ರೂಪುಗೊಂಡಿತ್ತು. ಅವರ ತತ್ವ, ಆದರ್ಶ, ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.



ವೀರಶೈವ ಸಮಾಜದ ಮುಖಂಡರಾದ ಅರ್ಚನಾ ಜಯಂತ್ ಮಾತನಾಡಿ, ಮಹಿಳೆಯರಿಗೆ ಸೂಕ್ತ ಸ್ಥಾನಮಾನವನ್ನು ನೀಡಿದ ಮಹಾನ್ ವ್ಯಕ್ತಿ ಬಸವಣ್ಣ. ಪುನರ್ವಿವಾಹಕ್ಕೆ ಅನುಮತಿ ನೀಡಿ ಮಹಿಳೆಯರ ಬದುಕಿಗೆ ಅರ್ಥ ಕಲ್ಪಿಸಿದರು. ವರ್ಣ ವ್ಯವಸ್ಥೆಯ ನೆಪದಲ್ಲಿ ಹೀನಾಯ ಸ್ಥಿತಿಯಲ್ಲಿದ್ದ ಮಹಿಳೆಯರಿಗೆ ಸಾಮಾಜಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯ ಕಲ್ಪಿಸಿ ಸಮಾನತೆಯ ಪಾಠ ಕಲಿಸಿದ ಶ್ರೇಷ್ಠ ಸಮಾಜ ಸುಧಾರಕ ಎಂದು ಹೇಳಿದರು.

ತಹಶೀಲ್ದಾರ್ ಅರವಿಂದ್, ಡಿವೈಎಸ್‌ಪಿ ಪ್ರಮೋದ್ ಜೈನ್, ಸಮಾಜದ ಮುಖಂಡರಾದ ಸುರೇಶ್, ರೇಖಾ, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಹರೀಶ್ ಹಾಗೂ ಇತರರಿದ್ದರು.

ಹಳೇಬೀಡು ವರದಿ: ಬಸವಣ್ಣನವರ ಆದರ್ಶಗಳನ್ನು ಪಾಲನೆ ಮಾಡಿದರೆ ಸಮಾಜದಲ್ಲಿ ಅಮೂಲಾಗ್ರ ಬದಲಾವಣೆ ಕಾಣಬಹುದು ಎಂದು ಶಾಸಕ ಎಚ್. ಕೆ. ಸುರೇಶ್ ಹೇಳಿದರು.

ಹಳೇಬೀಡಿನ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಜಯಂತಿ ಪ್ರಯುಕ್ತ ಬಸವೇಶ್ವರರ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಆಡು ಭಾಷೆಯಲ್ಲಿ ಸರಳವಾಗಿ ಜನರಿಗೆ ಅರ್ಥವಾಗುವಂತೆ ವಚನಗಳನ್ನು ರಚನೆ ಮಾಡಿದ ಬಸವಣ್ಣನವರು, ಸಮಾಜದಲ್ಲಿ ಹಲವಾರು ಬದಲಾವಣೆಗಳನ್ನು ತಂದರು. ಸಾಮಾಜಿಕ ತಾರತಮ್ಯ, ಮೂಢನಂಬಿಕೆ ಹೋಗಲಾಡಿಸಿದರು ಎಂದರು.

ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಕೆ. ಹುಲೀಗೌಡ, ತಾಲ್ಲೂಕು ವೀರಶೈವ ಲಿಂಗಾಯತ ಸಮಾಜ ಯುವ ಘಟಕ ಅಧ್ಯಕ್ಷ ಎಚ್.ಸಿ. ಚೇತನ್, ಮುಖಂಡರಾದ ಎಚ್. ಪರಮೇಶ್, ಬಸವರಾಜು, ಎಚ್.ಎನ್.ಉಮೇಶ ಪ್ರವೀಣ್ ಇದ್ದರು.

# ಒಂದು ಪುಂಡಾನೆ ಸೆರೆಗೆ ಕ್ರಮ: ಶಾಸಕ ಸಿಮೆಂಟ್ ಮಂಜು

## ಮೂಡಿಗೆರೆ ಭಾಗದ ಆನೆ ಬಾರದಂತೆ ತಡೆಯಿರಿ : ಸ್ಥಳೀಯರ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಮಲೆನಾಡು ಭಾಗದಲ್ಲಿ ಹೆಚ್ಚಿರುವ ಕಾಡಾನೆಗಳ ಹತೋಟಿ ಉದ್ದೇಶದಿಂದ ಒಂದು ಪುಂಡಾನೆ ಸೆರೆ ಹಿಡಿದು ಕೆಲವು ಆನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕಾಡಾನೆ ದಾಳಿಯಿಂದ ಇತ್ತೀಚೆಗೆ ಮೃತಪಟ್ಟ ತಾಲ್ಲೂಕಿನ ಬೈಕೆರೆ ಗ್ರಾಮದ ಷಣ್ಮುಖ ಅವರ ಮನೆಗೆ ಬುಧವಾರ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಅವರು ಮಾತನಾಡಿ, ಮಲೆನಾಡು ಭಾಗದಲ್ಲಿ ಕಾಡಾನೆ-ಮಾನವ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಕಾಡಾನೆ ಕ್ಷಿಪ್ರ ಪಡೆ ಸಿಬ್ಬಂದಿ ಸಾರ್ವಜನಿಕರಿಗೆ ಸ್ಪಂದಿಸಬೇಕು. ಕ್ಷಿಪ್ರ ಪಡೆಯ ಎಸಿಎಫ್ ಶರೀಫ ಎಂಬ ಅಧಿಕಾರಿ ತಿಂಗಳ ಹಿಂದೆ ಕಾಣೆಸಿಕೊಂಡಿದ್ದರು. ಈಗ ಎಲ್ಲಿದ್ದಾರೆಂಬ ಮಾಹಿತಿಯೂ ಇಲ್ಲವಾಗಿದೆ. ಮೂರು ತಿಂಗಳಿಗೊಮ್ಮೆಯಾದರೂ ಬೆಳೆಗಾರರು ಹಾಗೂ ಸಾರ್ವಜನಿಕರ ಜೊತೆ ಸಭೆ ಮಾಡಬೇಕು. ಆದರೆ ಅವರು ಸಾರ್ವಜನಿಕರಿಂದ ಅಂತರ ಕಾಯ್ದುಕೊಂಡಿದ್ದಾರೆ. ಕಾಡಾನೆಗಳು ಯಾರ ಮೇಲೆ ಬೇಕಾದರೂ ದಾಳಿ ನಡೆಸುತ್ತವೆಯಾದ್ದರಿಂದ ಕ್ಷಿಪ್ರ ಪಡೆಯವರು ಸಹ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಇಟಿಎಫ್ ಸಿಬ್ಬಂದಿ ಮೈ ಮರೆತು ಕೆಲಸ ಮಾಡದೆ ಸಾರ್ವಜನಿಕ ಸಮಸ್ಯೆಗಳಿಗೆ ಸೊಂದಿಸಬೇಕು ಎಂದರು. ತಾಲ್ಲೂಕಿನ ಹೆಚ್ಚಿರುವ ಕಾಡಾನೆಗಳ ಉಪಟಳ ಸಮಸ್ಯೆ ಬಗ್ಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರೊಂದಿಗೆ ಚರ್ಚಿಸಲಾಗಿದೆ. ಪುಂಡಾನೆಗಳನ್ನು ಗುರುತಿಸಿ ಒಂದು ಆನೆಯನ್ನು ಹಿಡಿದು ಕೆಲವು ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಲಾಗುವುದು. ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರು.



### ಕಣ್ಣೀರು ಹಾಕುತ್ತಲೇ ಸಂತೈಸಿದ ಶಾಸಕ

ಷಣ್ಮುಖ ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಲು ಬಂದಿದ್ದ ಶಾಸಕ ಸಿಮೆಂಟ್ ಮಂಜು, ಷಣ್ಮುಖ ಅವರ ಪತ್ನಿಯ ಆಕ್ರಂದನ ಕಂಡು ಕಣ್ಣೀರು ಹಾಕಿದರು. ಕಾಡಾನೆ ಸಂಚಾರದ ಕುರಿತು ಮಾಹಿತಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಬದುಕು ಭಾರವಾಗಿದೆ ಎಂದು ಅವರು ಬಿಕ್ಕಿ ಬಿಕ್ಕಿ ಅತ್ತಾಗ ಶಾಸಕರು ಸಹ ಕಣ್ಣೀರು ಸುರಿಸುತ್ತಾ ಸಂತೈಸಿದರು.

### ಸಿಬ್ಬಂದಿ ವಿರುದ್ಧ ದೂರಿನ ಸುರಿಮಳೆ

ಇಟಿಎಫ್ ಸಿಬ್ಬಂದಿ ಕಾಡಾನೆಗಳ ಚಲನವಲನ ಕುರಿತು ಸರಿಯಾದ ಮಾಹಿತಿ ನೀಡುತ್ತಿಲ್ಲ ಎಂದು ಬೆಳೆಗಾರರು ಶಾಸಕರ ಗಮನಕ್ಕೆ ತಂದರು. ಒಂದು ಭಾಗದಲ್ಲಿ ಕಾಡಾನೆಗಳಿರುವ ಮಾಹಿತಿ ನೀಡುತ್ತಾರೆ. ಮತ್ತೊಂದು ಭಾಗಕ್ಕೆ ಆನೆಗಳು ಸಂಚರಿಸಿರುವ ಮಾಹಿತಿ ನೀಡುವುದಿಲ್ಲ. ವಾಟ್ಸ್ಆ್ಯಪ್ ಹಾಗೂ ಮೆಸೆಜ್ ರವಾನೆಯಾಗುವುದರಲ್ಲಿ ವಿಳಂಬವಾಗುತ್ತಿದೆ. ಕಾಡಾನೆಗಳ ಚಲನವಲನ ಗುರುತಿಸಿ ನಿಖರವಾದ ಮಾಹಿತಿ ಕೊಡಬೇಕು ಎಂದು ಹೇಳಿದರು.

ಷಣ್ಮುಖ ಅವರನ್ನು ಸಾಯಿಸಿರುವ ಆನೆಯ ಕುರಿತ ನಿಖರ ಮಾಹಿತಿ ಅರಣ್ಯ ಇಲಾಖೆಗೆ ಅಧಿಕಾರಿಗಳಿಗೆ ಇಲ್ಲ. ಕೆಲವೇ ಆನೆಗಳಿಗೆ ಮಾತ್ರ ರೇಡಿಯೋ ಕಾಲರ್ ಹಾಕುವುದರಿಂದ ಯಾವ ಪ್ರಯೋಜನವಿಲ್ಲ. ಎಲ್ಲಾ ಆನೆಗಳಿಗೂ ರೇಡಿಯೋ ಕಾಲರ್ ಅಳವಡಿಸಬೇಕು. ಮೂಡಿಗೆರೆಯಿಂದ ಈ ಕಡೆಗೆ ಆನೆಗಳನ್ನು ಓಡಿಸುವುದನ್ನು ನಿಲ್ಲಿಸಬೇಕು. ಕಾಡಾನೆ ಪೀಡಿತ ಪ್ರದೇಶಗಳಲ್ಲಿ ಬೀದಿ ದೀಪಗಳನ್ನು ಸರಿಯಾಗಿ ಅಳವಡಿಕೆ ಮಾಡಬೇಕು ಎಂದು ಆಗ್ರಹಿಸಿದರು. ಮೃತರ ಸಂಬಂಧಿಕರಾದ ಸಂಚಿತ ಮಾತನಾಡಿ, ಕುಟುಂಬಕ್ಕೆ ಆಧಾರವಾಗಿದ್ದ ಷಣ್ಮುಖ ಅವರ ಸಾವಿನಿಂದ ದಿಕ್ಕು ತೋಚದಂತಾಗಿದೆ. ಕಾಫಿ ತೋಟವಿದೆ ಆದರೆ ಕೆಲಸ ಮಾಡಿಸಲು ಕೂಲಿ ಕಾರ್ಮಿಕರ ಕೊರತೆಯಿಂದ ಕಾಫಿ ತೋಟದ ನಿರ್ವಹಣೆ ಕಷ್ಟವಾಗಲಿದೆ. ಆದ್ದರಿಂದ ಸರ್ಕಾರ ಸಂಬಧಿಕರೊಬ್ಬರಿಗೆ ಸರ್ಕಾರಿ ಉದ್ಯೋಗ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ವಲಯ ಅರಣ್ಯಾಧಿಕಾರಿ ಹೇಮಂತ್, ಅರಣ್ಯಾಧಿಕಾರಿಗಳಾದ ಮಹಾದೇವ್, ಮಂಜುನಾಥ್, ಮೃತರ ಸಹೋದರ ಸಂಜೀವ್, ಕಾಫಿ ಬೆಳೆಗಾರರಾದ ಪ್ರಸನ್ನ ಕುಮಾರ್, ಯೋಗೇಶ್, ಕುಮಾರ್, ಬಿರಡಹಳ್ಳಿ ಬಾಲು, ಯಶ್ವಂತ್, ಅಗ್ನಿ ಸೋಮಶೇಖರ್, ಸಂತೋಷ್ ಇತರರಿದ್ದರು.

# ಮಹನೀಯರ ಅರ್ಥಪೂರ್ಣ ಜಯಂತಿಗೆ ಸೂಚನೆ

ಹಾಸನ: ಶಂಕರಾಚಾರ್ಯ ಜಯಂತಿಯನ್ನು ಮೇ 2, ಭಗೀರಥ ಜಯಂತಿ ಮೇ 4 ಹಾಗೂ ಭಗವಾನ್ ಬುದ್ಧರ ಜಯಂತಿಯನ್ನು ಮೇ 12 ರಂದು ಅರ್ಥಪೂರ್ಣವಾಗಿ ಆಚರಿಸಲು ಸಿದ್ದತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ ಸಮುದಾಯದ ಮುಖಂಡರ ಒಮ್ಮತದ ಅಭಿಪ್ರಾಯದಂತೆ ನಿಗದಿಪಡಿಸಿದ ದಿನಾಂಕಗಳಂದು ಕಾರ್ಯಕ್ರಮ ಆಯೊಝಿಸಬೇಕು ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ. ತಾರಾನಾಥ್ ಇತರರಿದ್ದರು.

# ನಾಳೆ ಅಲ್ಲಲ್ಲಿ ವಿದ್ಯುತ್ ವ್ಯತ್ಯಯ

ಹಾಸನ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ದುದ್ದ ಉಪವಿಭಾಗ ವ್ಯಾಪ್ತಿಯಲ್ಲಿ 220ಕೆ.ವಿ.ಎ ಸ್ವೀಕೃತ ಕೇಂದ್ರ, ಕಾಮಗಾರಿ ನಿರ್ವಹಣೆ ಕೈಗೊಂಡಿರುವುದರಿಂದ ಮೇ 2ರ ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ದುದ್ದ, ಚಿಕ್ಕಕಡಲೂರು, ಹೆಚ್. ಮೈಲನಹಳ್ಳಿ, ಸಂತೆಕೊಪ್ಪಲು, ಹಿರೆಕಡಲೂರು, ಸಂತೆಹೊನ್ನೇನಹಳ್ಳಿ, ಕೋಡಿಕೊಪ್ಪಲು, ಉದ್ದೂರಹಳ್ಳಿ, ಹೆಡ್ಡನಹಳ್ಳಿ, ಕೋರವಂಗಲಗೇಟ್, ಕಾರೆಬಾರೆ, ಅನುಗವಳ್ಳಿ, ಹೊನ್ನಮ್ಮನಹಳ್ಳಿ, ಬೊಮ್ಮೆನಹಳ್ಳಿ, ಮೂಲ ದುದ್ದ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆಯಲ್ಲಿ ತಿಳಿಸಿದೆ.

# ಪುಂಡಾನೆಗಳ ಸೆರೆಗೆ ಅರಣ್ಯ ಇಲಾಖೆ ಸಿದ್ಧತೆ

## ಉಪಟಳ ನೀಡುತ್ತಿರುವ ಭೀಮನ ಮೇಲೆ ಕಣ್ಣು : ಎರಡು ದಿನಗಳಲ್ಲಿ ಕಾರ್ಯಾಚರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಲೆನಾಡು ಭಾಗದಲ್ಲಿ ಕಾಡಾನೆಗಳ ಉಪಟಳ ಮಿತಿಮೀರುತ್ತಿರುವುದರಿಂದ ಕಾರ್ಯಾಚರಣೆ ಮೂಲಕ ಪುಂಡಾನೆಗಳ ಸೆರೆಗೆ ಅರಣ್ಯ ಇಲಾಖೆ ಯೋಜನೆ ರೂಪಿಸಿಕೊಂಡಿದೆ.


ಸಕಲೇಶಪುರ ಮತ್ತು ಬೇಲೂರು ತಾಲ್ಲೂಕು ಭಾಗದಲ್ಲಿ ಕಾಡಾನೆಗಳ ಉಪಟಳ ಮತ್ತೆ ಹೆಚ್ಚಾಗಿರುವುದರಿಂದ ಜನರು ನಿರ್ಭಿತಿಯಿಂದ ರಸ್ತೆಯಲ್ಲಿ ಓಡಾಡುವುದು, ಕಾಫಿ ತೋಟ, ಕೃಷಿ ಜಮೀನಿನಲ್ಲಿ ಕೆಲಸ ಮಾಡುವುದೇ ಕಷ್ಟವಾಗಿದೆ. ಏ.25 ರಂದು ಸಕಲೇಶಪುರ ತಾಲ್ಲೂಕಿನ ಬೈಕೆರೆ ಗ್ರಾಮದ ಕಾಫಿ ಬೆಳೆಗಾರರ ಷಣ್ಮುಖ (40) ಅವರನ್ನು ಕಾಡಾನೆ ಬರ್ಬರವಾಗಿ ಕೊಂದು ಹಾಕಿರುವುದರಿಂದ ಜನರ ಆಕ್ರೋಶ ತೀವ್ರಗೊಳ್ಳಲು ಪ್ರಮುಖ ಕಾರಣವಾಗಿದೆ. ಹೀಗಾಗಿ ತುರ್ತಾಗಿ ಪುಂಡಾನೆಗಳ ಸೆರೆ ಹಿಡಿದು ಸ್ಥಳಾಂತರಕ್ಕೆ ಮುಂದಾಗಿರುವ ಅರಣ್ಯ ಇಲಾಖೆ ಈಗಾಗಲೇ ಉಪಟಳ ನೀಡುತ್ತಿರುವ ಕಾಡಾನೆಗಳ ಮೇಲೆ ನಿಗಾ ವಹಿಸಿ ಚಲನವಲನ ಗಮನಿಸುವಂತೆ ಇಟಿಎಫ್ ಮತ್ತು ಆರ್ ಆರ್‌ಟಿ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ.

ಮೇ 2 ರಂದು ಬಂಡೀಪುರ ಮತ್ತು ನಾಗರಹೊಳೆಯಿಂದ ಸಾಕಾನೆಗಳ ತಂಡ ಕ್ಯಾಂಪ್‌ಗೆ ಆಗಮಿಸುವ ನಿರೀಕ್ಷೆ ಇದೆ. ಎಲ್ಲವೂ ನಿಗದಿಯಾದಂತೆ ನಡೆದರೆ ಮೇ.3 ರಿಂದ ಕಾರ್ಯಾಚರಣೆ ಆರಂಭವಾಗಲಿದೆ. ನಾಡಿನಲ್ಲಿದ್ದ ಕಾಡಾನೆಗಳನ್ನು ಸೆರೆ ಹಿಡಿದು ಕಾಡಿಗೆ ಬಿಡುವುದು, ಕಾಡು ಸೇರಿದ ಪುಂಡಾನೆಗಳು ಕೆಲ ದಿನಗಳ ಬಳಿಕ ಪುನಃ ನಾಡಿಗೆ ಬರುವುದು. ಕಾಡಾನೆ ದಾಳಿಗೆ ತುತ್ತಾದ ಕುಟುಂಬದವರಿಗೆ ಪರಿಹಾರ ಇದೇ ಕಾರ್ಯ ಮುಂದುವರೆಯುತ್ತಿದೆ. ಕಾಡಾನೆ ಕಾರ್ಯಾಚರಣೆ, ಪರಿಹಾರಕ್ಕೆ ವ್ಯಯ ಮಾಡುವ ಹಣವನ್ನೇಲ್ಲ ಕ್ರೂಢೀಕರಿಸಿದ್ದರೆ ಜಿಲ್ಲೆಯಲ್ಲಿ ಬೃಹತ್ ಆನೆ ಧಾಮವನ್ನೇ ನಿರ್ಮಾಣ ಮಾಡಬಹುದಾಗಿತ್ತು. ಕಾಡಾನೆ-ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸುವಂತೆ ದಶಕದಿಂದ ನಿರಂತರವಾಗಿ ಪ್ರತಿಭಟನೆ, ಹೋರಾಟ ನಡೆಯುತ್ತಿದ್ದರೂ ಗಂಭೀರವಾಗಿ ಯಾವುದೇ ಚಿಂತನೆ ನಡೆಸದ ಸರ್ಕಾರ, ಅರಣ್ಯ ಇಲಾಖೆ ಕಾಡಾನೆ ದಾಳಿಯಿಂದ ಸಾವುಗಳ ಸಂಭವಿಸಿದಾಗಲೆಲ್ಲ ಸಿದ್ಧ ಮಾದರಿಯಂತೆ ಮೂರ್ನಾಲ್ಕು ದಿನಗಳ ಕಾಲ ಸಾಕಾನೆಗಳನ್ನು ತಂದು ಪುಂಡಾನೆಗಳ ಸೆರೆ ಹಿಡಿಯುವುದು, ಹೆಣ್ಣಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಿ ಜನರ ಆಕ್ರೋಶ ತಣ್ಣಗಾದ ನಂತರ ನಾಪತ್ತೆಯಾಗುತ್ತಾರೆ. ಮತ್ತದೇ ಸಮಸ್ಯೆ ಮುಂದುವರೆಯುತ್ತಿದೆ. ಜಿಲ್ಲೆಯ ಮಲೆನಾಡು ಭಾಗದ ಜನರು ಅನುಭವಿಸುತ್ತಿರುವ ಸುದೀರ್ಘ ಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸುವುದರ ಬದಲು ಮೂರ್ನಾಲ್ಕು ಕಾಡಾನೆಗಳನ್ನು ಸೆರೆ ಹಿಡಿದು ಕಣ್ಣೊರೆಸುವ ತಂತ್ರ ಮಾಡಲಾಗುತ್ತಿದೆ ಎಂಬುದು ಕಾಡಾನೆ ಪೀಡಿತ ಪ್ರದೇಶದ ಜನರ ಆಕ್ರೋಶವಾಗಿದೆ.

### ಭೀಮ ಸೆರೆ ಸಾಧ್ಯತೆ

ಅರಣ್ಯ ಇಲಾಖೆಯ ಶಾರ್ಫ್‌ಶೂಟರ್ ವೆಂಕಟೇಶ್ ಅವರನ್ನು ಬಲಿ ಪಡೆದಿದ್ದ ಭೀಮ ಹೆಸರಿನ ಕಾಡಾನೆಯನ್ನು ಈ ಬಾರಿ ಸೆರೆ ಹಿಡಿಯುವ ಸಾಧ್ಯತೆ ಇದೆ. ಶಾಂತ ಸ್ವಾಭಾವದ ಕಾಡಾನೆ ಭೀಮ ಇತ್ತೀಚೆಗೆ ತನ್ನ ವರ್ತನೆ ಬದಲಾಯಿಸಿಕೊಂಡು ಜನರ ಮೇಲೆ ದಾಳಿಗೆ ಮುಂದಾಗುತ್ತಿರುವುದು ಸ್ಥಳೀಯರಲ್ಲಿ ಆತಂಕ ಹುಟ್ಟಿಸಿದೆ. ಈ ಹಿಂದೆ ಬೇಲೂರಿನಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಭೀಮನ ಆಗಮನದಿಂದ ಕಾರ್ಯಾಚರಣೆಗೆ ಅಡ್ಡಿಯುಂಟಾಗಿತ್ತು. ಹೀಗಾಗಿ ಅರಣ್ಯ ಇಲಾಖೆ ಭೀಮನ ಮೇಲೆ ಒಂದು ಕಣ್ಣಿಟ್ಟಿದೆ. ಭೀಮನ ಸೆರೆಗೆ ಪರ-ವಿರೋಧ ಮಾತುಗಳು ಕೇಳಿ ಬರುತ್ತಿವೆ.

# ಕಲ್ಯಾಣ ರಾಜ್ಯಕ್ಕೆ ಬಸವೇಶ್ವರ ತತ್ತ್ವಾದರ್ಶ ಪೂರಕ



ಬೇಲೂರು: ಇತ್ತೀಚಿನ ದಿನದಲ್ಲಿ ನಡೆಯುತ್ತಿರುವ ಕೋಮು ಗಲಭೆ, ಸಾಮರಸ್ಯದ ಧಕ್ಕೆಯಿಂದ ದೇಶದ ನಿವಾಸಿಗಳು ಭೀತಿಯಿಂದ ಕಾಲ ಕಳೆಯುತ್ತಿದ್ದಾರೆ. ವಿಶ್ವಗುರು ಬಸಣ್ಣನವರ ಸಂದೇಶ ಪಾಲಿಸಿದರೆ ಕಲ್ಯಾಣ ರಾಜ್ಯ ಸ್ಥಾಪಿಸಬಹುದು ಎಂದು ಶಾಸಕ ಹೆಚ್.ಕೆ. ಸುರೇಶ್ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಬುಧವಾರ ರಾಷ್ಟಿಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಬಸವಣ್ಣ ಒಂದು ಜಾತಿ, ಧರ್ಮಕ್ಕೆ ಸೀಮಿತರಲ್ಲ. ವಚನ ಸಾಹಿತ್ಯದ ಮೂಲಕ ಮೌಢ್ಯ, ಅಸಮಾನತೆ, ಸ್ತ್ರೀ ಶೋಷಣೆ, ಅಸ್ಪೃಶ್ಯತೆ ವಿರುದ್ಧ ಹೋರಾಡಿದರು. ಬುದ್ಧ, ಬಸವ, ಅಂಬೇಡ್ಕರ್, ಕನಕದಾಸರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ಸಾಗಬೇಕು ಎಂದರು.

ತಹಸೀಲ್ದಾರ್ ಎಂ.ಮಮತ ಮಾತನಾಡಿ, ಬಸವಾದಿ ಶರಣರು ನೀಡಿದ ಒಂದೊಂದು ವಚನ ಸಾಹಿತ್ಯ ಬದುಕಿಗೆ ಬೆಳಕು ನೀಡುತ್ತವೆ. ಬಸವ ಜಯಂತಿ ಆಚರಣೆ ಜೊತೆಗೆ ಕನಿಷ್ಟ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಜಯಂತಿ ಅರ್ಥಪೂರ್ಣವಾಗಲಿ. ವಿದ್ಯಾರ್ಥಿಗಳು ವಚನ ಸಾಹಿತ್ಯದ ಬಗ್ಗೆ ತಿಳವಳಿಕೆ ಹೊಂದಬೇಕು. ಸಮ ಸಮಾಜದ ಪರಿಕಲ್ಪನೆ ಸಾಕಾರವಾಗಬೇಕು ಎಂದರು. ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎ.ಎಸ್. ಬಸವರಾಜು, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಲ್. ರಾಜೇಗೌಡ, ಸಿಪಿಐ ರೇವಣ್ಣ, ಕ್ಷೇತ್ರ ಸಮನ್ವಯ ಅಧಿಕಾರಿ ಶಿವಮರಿಯಪ್ಪ, ರಾಜ್ಯ ಕಾರ್ಯದರ್ಶಿ ವಿಕ್ರಮ್ ಕೌರಿ, ಉಪಾಧ್ಯಕ್ಷ ಅರಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮದನ್ ಬಳ್ಳೂರು, ಮಹಿಳಾ ಅಧ್ಯಕ್ಷೆ ವಿಂಪು ಇತರರಿದ್ದರು.

# ಸಮ ಸಮಾಜದ ಪಿತಾಮಹ ವಿಶ್ವಗುರು ಬಸವಣ್ಣ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಅನುಭವ ಮಂಟಪ ನಿರ್ಮಿಸಿ ಎಲ್ಲಾ ಜಾತಿ ಜನಾಂಗವನ್ನು ಒಂದು ಮಾಡುವ ಮೂಲಕ ಸಮಾನತೆ ಪ್ರತಿಪಾದಿಸಿದ ಬಸವಣ್ಣ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ಸಾಗಬೇಕು ಎಂದು ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಿ.ಎಂ. ರಂಗನಾಥ್ ಹೇಳಿದರು.

ಪಟ್ಟಣದ ವಿದ್ಯಾ ವಿಕಾಸ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಮತ್ತು ಬಸವಶ್ರೀ ಹಾಗೂ ಬಸವ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಬಸವ ತತ್ತ್ವಗಳ ಪಾಲನೆಯಿಂದ ಸಮೃದ್ಧ ಸಮಾಜವನ್ನು ನಿರ್ಮಿಸಲು ಸಾಧ್ಯ. ಕಾಯಕ ತತ್ವ ಮತ್ತು ದಾಸೋಹ ಗುಣ ಪ್ರತಿಯೊಬ್ಬರಲ್ಲಿ ಬೆಳೆಯಬೇಕಿದೆ. ಬಸವಾದಿ ಪ್ರಮಥರು ನೀಡಿದ ವಚನ ಸಾಹಿತ್ಯ ಒಂದು ಜಾತಿ, ಧರ್ಮ, ವರ್ಗಕ್ಕೆ ಸೀಮಿತವಾಗಿಲ್ಲ ಎಂದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್ ಮಾತನಾಡಿ, ಸುತ್ತೂರು ಮಠದ ಹಿಂದಿನ ಜಗದ್ಗುರುಗಳು ತಮ್ಮ ಜನ್ಮದಿನದ ನೆನಪಿಗೆ ಶರಣ ಸಾಹಿತ್ಯ ಪರಿಷತ್ತು ಸ್ಥಾಪನೆ ಮಾಡಿದ್ದಾರೆ. ಅಂದಿನಿದ ರಾಜ್ಯ, ಹೊರ ರಾಜ್ಯ ಮತ್ತು ವಿದೇಶದಲ್ಲಿ ಸಂಸ್ಥೆ ಕೆಲಸ ಮಾಡುತ್ತಿದೆ. ವಿಶೇಷವಾಗಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಬೇಲೂರಿನಲ್ಲಿ ಅತ್ಯಂತ ಸಕ್ರಿಯವಾಗಿದೆ. ಆದರೆ ಇಲ್ಲಿನ ಯುವ ಘಟಕ ಮತ್ತು ಮಹಿಳಾ ಘಟಕ ಯಾವುದೇ ಕಾರ್ಯಕ್ರಮ ನಡೆಸಿಲ್ಲ, ಈ ಬಗ್ಗೆ ಅಧ್ಯಕ್ಷರು ಸಂಘಟನೆ ದೃಷ್ಟಿಯಿಂದ ಅಗತ್ಯವಿದ್ದರೆ ಬದಲಾವಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ ಮಾತನಾಡಿ, ಶರಣ ಸಾಹಿತ್ಯ ಪರಿಷತ್ತಿಗೆ ನಾನು ಅಧ್ಯಕ್ಷನಾಗಿ ಒಂದು ವರ್ಷ ಕಳೆದಿದೆ. 14 ಕಾರ್ಯಕ್ರಮ ನಡೆದಿದ್ದು, ಅದರಲ್ಲಿ ಯುವ ಜನಾಂಗಕ್ಕೆ ವಚನ ಸಾಹಿತ್ಯದ ಅನುಭವ ತಿಳಿಯಬೇಕು ಎಂಬ ಹಂಬಲದಿದ ಎಂಟು ಕಾಲೇಜಿನಲ್ಲಿ ಸಮಾರಂಭ ನಡೆಸಲಾಗಿದೆ. ಪ್ರತಿ ಕಾರ್ಯಕ್ರಮದಲ್ಲಿ ಸಮಾಜದಲ್ಲಿ ಎಲೆಮರೆಯ ಪ್ರತಿಭೆಗಳನ್ನು ಗುರುತಿಸುವ ಕೆಲಸ ಮಾಡುತ್ತಿದೆ ಎಂದರು.

ಪ್ರಾಂಶುಪಾಲ ಡಾ. ರಮೇಶ್ ಅವರಿಗೆ ಬಸವಶ್ರೀ ಪ್ರಶಸ್ತಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದ ಪ್ರಾರ್ಥನಾ (ವಿಜ್ಞಾನ) ಫಾತೀಮ ಸಫೀರಾ (ವಾಣಿಜ್ಯ) ಬಸವ ಪುರಸ್ಕಾರ ನೀಡಲಾಯಿತು. ಸಾಹಿತಿ ಟಿ.ಡಿ. ತಮ್ಮಣ್ಣಗೌಡ, ಪತ್ರಕರ್ತರ ಸಂಘದ ಕಾರ್ಯದರ್ಶಿ ಬಿ.ಬಿ.ಶಿವರಾಜ್, ವೀರಶೈವ ಲಿಂಗಾಯತ ಸಮಾಜದ ರಾಜ್ಯ ಕಾರ್ಯದರ್ಶಿ ವಿಕ್ರಮೌ ಕೌರಿ, ಧನಂಜಯ್, ರಾಜಕುಮಾರ್, ಗೀತಾ ಶಿವರಾಜ್, ಶಶಿರೇಖಾ, ಆರ್.ಎಸ್. ಮಹೇಶ್, ವಿನುತ ಧನಂಜಯ್, ಪ್ರಧಾನ ಕಾರ್ಯದರ್ಶಿ ಮದನ್ ಬಳ್ಳೂರು, ರಾಜಶೇಖರ, ಸುಜಯ್, ಚಂದನ್, ಶಶಿಕಲಾ, ಗೌರಮ್ಮ ಇತರರಿದ್ದರು.



ಹೊಯ್ಸಳರ ನೆನಪುಗಳು
ಶ್ರೀ ಲಕ್ಷ್ಮೀ ನರಸಿಂಹ ದೇವಾಲಯ ನುಗ್ಗೇಹಳ್ಳಿ
ರಾಮ, ಲಕ್ಷ್ಮಣ, ಸೀತಾ, ಹನುಮಂತ.
- ಡಾ. ಎನ್. ರಮೇಶ್, ಹಾಸನ

## ಇತಿಹಾಸದಲ್ಲಿ ಈ ದಿನ

### ಮೇ-01

#### ಕಾರ್ಮಿಕ ಹಕ್ಕುಗಳು ಮತ್ತು ಮೇ ಡೇ

**1886:** ಅಮೆರಿಕಾದಲ್ಲಿ ಎಂಟು ಗಂಟೆಗಳ ಕೆಲಸದ ದಿನಕ್ಕಾಗಿ ನಡೆದ ಹೋರಾಟದ ಭಾಗವಾಗಿ ಮೇ 1 ರಂದು ಚಿಕಾಗೋದಲ್ಲಿ ಹೋರಾಟ ಆರಂಭವಾಯಿತು. ಇದು ನಂತರ ಹೇಮಾರ್ಕೆಟ್ ಘಟನೆಗೆ ದಾರಿ ಮಾಡಿತು. ಈ ಹೋರಾಟವನ್ನು ಸ್ಮರಿಸಲು 1889 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಇಂಟರ್ ನ್ಯಾಷನಲ್ ಸೋಷಿಯಲಿಸ್ಟ್ ಕಾಂಗ್ರೆಸ್‌ನಲ್ಲಿ ಮೇ 1 ಅನ್ನು ಅಂತರರಾಷ್ಟ್ರೀಯ ಕಾರ್ಮಿಕ ದಿನವಾಗಿ ಘೋಷಿಸಲಾಯಿತು.

**1955:** ರೋಮನ್ ಕ್ಯಾಥೋಲಿಕ್ ಚರ್ಚ್, ಮೇ 1 ಅನ್ನು ಸೇಂಟ್ ಜೋಸೆಫ್ ದಿ ವರ್ಕ್ ದಿನವಾಗಿ ಘೋಷಿಸಿತು.

#### ಇತಿಹಾಸದ ಪ್ರಮುಖ ಘಟನೆಗಳು

**1707:** ಇಂಗ್ಲೆಂಡ್ ಮತ್ತು ಸ್ಕಾಟ್ ಲ್ಯಾಂಡ್ ಒಂದಾಗಿ ಗ್ರೇಟ್ ಬ್ರಿಟನ್ ಎಂಬ ಹೊಸ ರಾಷ್ಟ್ರ ರೂಪುಗೊಂಡಿತು.

**1840:** ಪೆನ್ನಿ ಬ್ಲಾಕ್, ವಿಶ್ವದ ಮೊದಲ ಅಂಟಿಸಬಹುದಾದ ಅಂಚೆ ಟಿಕೆಟ್ ಇಂಗ್ಲೆಂಡ್‌ನಲ್ಲಿ ಬಿಡುಗಡೆಗೊಂಡಿತು.

**1960:** ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ಸ್ಥಾಪನೆಯ ದಿನ.

# ಇಂದು ಕಾರ್ಮಿಕ ದಿನಾಚರಣೆ: ಇದು ಶ್ರಮಿಕರ ಹಬ್ಬ

ಕಾರ್ಮಿಕ ದಿನಾಚರಣೆ ಅಥವಾ ಮೇ ದಿನ. ಪ್ರತಿವರ್ಷ ಮೇ 1 ರಂದು ವಿಶ್ವಾದ್ಯಂತ ಆಚರಿಸಲ್ಪಡುತ್ತದೆ. ಇದು ಕಾರ್ಮಿಕರ ಹಕ್ಕುಗಳಿಗಾಗಿ ನಡೆದ ಹೋರಾಟಗಳಿಗೆ ಸಮರ್ಪಿತವಾದ ದಿನವಾಗಿದೆ. ಈ ದಿನದ ಐತಿಹಾಸಿಕ ಮೂಲವು 1886ರಲ್ಲಿ ಅಮೆರಿಕದ ಚಿಕಾಗೋದಲ್ಲಿ ನಡೆದ ಹೇಮಾರ್ಕೆಟ್ ಘಟನೆಗೆ ಸಂಬಂಧಿಸಿದೆ.

ಅಲ್ಲಿ ಕಾರ್ಮಿಕರು ಎಂಟು ಗಂಟೆಗಳ ಕೆಲಸದ ಸಮಯ, ಉತ್ತಮ ಕೆಲಸದ ವಾತಾವರಣ ಮತ್ತು ನ್ಯಾಯಯುತ ವೇತನಕ್ಕಾಗಿ ಪ್ರತಿಭಟನೆ ನಡೆಸಿದರು. ಈ ಹೋರಾಟವು ಜಾಗತಿಕ ಕಾರ್ಮಿಕ ಚಳವಳಿಗೆ ಚಾಲನೆ ನೀಡಿತು. 1889ರಲ್ಲಿ ಇಂಟರ್‌ನ್ಯಾಷನಲ್ ಸೋಷಿಯಲಿಸ್ಟ್ ಕಾಂಗ್ರೆಸ್ ಮೇ 1 ರಂದು ಅಂತರರಾಷ್ಟ್ರೀಯ ಕಾರ್ಮಿಕ ದಿನವನ್ನು ಆಚರಿಸಲು ನಿರ್ಧರಿಸಿತು. ಭಾರತದಲ್ಲಿ ಕಾರ್ಮಿಕ ದಿನಾಚರಣೆಯನ್ನು ಮೊದಲ ಬಾರಿಗೆ 1923ರಲ್ಲಿ ಚೆನ್ನೈನಲ್ಲಿ ಆಚರಿಸಲಾಯಿತು.

ಲೇಬರ್ ಕಿಸಾನ್ ಪಾರ್ಟಿಯ ನಾಯಕ ಸಿಂಗಾರವೇಲು ಚೆಟ್ಟಿಯಾರ್ ಈ ಆಚರಣೆಯನ್ನು ಆಯೋಜಿಸಿದರು. ಇದು ಭಾರತದ ಕಾರ್ಮಿಕ ಚಳವಳಿಯ ಒಂದು ಮೈಲಿಗಲ್ಲಾಯಿತು. ಇಂದು ಈ ದಿನವನ್ನು ಭಾರತದಾದ್ಯಂತ ಸಾರ್ವಜನಿಕ ರಜಾದಿನವಾಗಿ ಆಚರಿಸಲಾಗುತ್ತದೆ.

### ದಿನಾಚರಣೆಯ ಮಹತ್ವ

ಕಾರ್ಮಿಕ ದಿನಾಚರಣೆಯು ಕಾರ್ಮಿಕರ ಕೊಡುಗೆಯನ್ನು ಗೌರವಿಸುವ ಜೊತೆಗೆ ಅವರ ಹಕ್ಕುಗಳಿಗಾಗಿ ಹೋರಾಡುವ ಸಂಕಲ್ಪವನ್ನು ಪುನರುಚ್ಚಸುತ್ತದೆ. ಉತ್ತಮ ವೇತನ, ಕೆಲಸದ ಸುರಕ್ಷತೆ, ಮತ್ತು ಸಾಮಾಜಿಕ ಭದ್ರತೆಗಾಗಿ ಕಾರ್ಮಿಕರ ಹಕ್ಕುಗಳನ್ನು ಒತ್ತಾಯಿಸುವುದು. ಬಾಲ ಕಾರ್ಮಿಕ, ಕಡಿಮೆ ವೇತನ, ಮತ್ತು ಅಸುರಕ್ಷಿತ ಕೆಲಸದ ಪರಿಸ್ಥಿತಿಗಳ ವಿರುದ್ಧ ಧ್ವನಿಯನ್ನು ಎತ್ತುವುದು ಈ ದಿನದ ಮಹತ್ವವಾಗಿತ್ತು.

### ಕಾರ್ಮಿಕ ಸಂಘಗಳ ಪಾತ್ರ


ಕಾರ್ಮಿಕ ಸಂಘಗಳು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಸಾಮೂಹಿಕ ಒಪ್ಪಂದಗಳನ್ನು ಮಾಡಿಕೊಳ್ಳಲು ಪ್ರಮುಖ ಪಾತ್ರವಹಿಸುತ್ತವೆ. ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಲು ಮತ್ತು ಎಲ್ಲರಿಗೂ ಘನತೆಯ ಬದುಕನ್ನು ಒದಗಿಸಲು ಪ್ರಯತ್ನಿಸುವುದು. ಭಾರತದಲ್ಲಿ ಕಾರ್ಮಿಕರ ಸ್ಥಿತಿಯು ಸಂಕೀರ್ಣವಾಗಿದೆ. ಏಕೆಂದರೆ ದೇಶದ ಆರ್ಥಿಕತೆಯು ಔಪಚಾರಿಕ ಮತ್ತು ಅನೌಪಚಾರಿಕ ವಲಯಗಳನ್ನು ಒಳಗೊಂಡಿದೆ.

### ಅನೌಪಚಾರಿಕ ವಲಯದ ಪ್ರಾಬಲ್ಯ

ಭಾರತದ ಕಾರ್ಮಿಕ ಶಕ್ತಿಯ ಸುಮಾರು ಶೇ. 90 ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುತ್ತದೆ. ಇದರಲ್ಲಿ ಕೃಷಿ, ನಿರ್ಮಾಣ ಮತ್ತು ಸಣ್ಣ-ಪ್ರಮಾಣದ ಕೈಗಾರಿಕೆಗಳು ಸೇರಿವೆ. ಈ ಕಾರ್ಮಿಕರಿಗೆ ಕೆಲಸದ ಭದ್ರತೆ, ಸಾಮಾಜಿಕ ಭದ್ರತೆ ಅಥವಾ ಆರೋಗ್ಯ ವಿಮೆಯಂತಹ ಸೌಲಭ್ಯಗಳು ಸಿಗುವುದಿಲ್ಲ.

### ಕಡಿಮೆ ವೇತನ ಮತ್ತು ಶೋಷಣೆ

ಅನೌಪಚಾರಿಕ ವಲಯದ ಕಾರ್ಮಿಕರು ಸಾಮಾನ್ಯವಾಗಿ ಕನಿಷ್ಠ ವೇತನಕ್ಕಿಂತ ಕಡಿಮೆ ಸಂಬಳವನ್ನು ಪಡೆಯುತ್ತಾರೆ. ಮಹಿಳಾ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರು ವಿಶೇಷವಾಗಿ ಶೋಷಣೆಗೆ ಒಳಗಾಗುತ್ತಾರೆ.




### ಭವಿಷ್ಯದ ದಿಕ್ಕು

ಭಾರತದಲ್ಲಿ ಕಾರ್ಮಿಕರ ಸ್ಥಿತಿಯನ್ನು ಸುಧಾರಿಸಲು ಕ್ರಮಗಳ ಅಗತ್ಯವಿದೆ. ಕಾರ್ಮಿಕ ಕಾನೂನುಗಳ ಅನುಷ್ಠಾನಕ್ಕೆ ಕಟ್ಟುನಿಟ್ಟಾದ ಕ್ರಮ. ಅನೌಪಚಾರಿಕ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಆರೋಗ್ಯ ವಿಮೆಯನ್ನು ವಿಸ್ತರಿಸುವುದು. ಕಾರ್ಮಿಕರಿಗೆ ತರಬೇತಿ ಮತ್ತು ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಉದ್ಯೋಗ ಸಾಮರ್ಥ್ಯವನ್ನು ಹೆಚ್ಚಿಸುವುದು. ಕಾರ್ಮಿಕ ಸಂಘಗಳಿಗೆ ಹೆಚ್ಚಿನ ಬೆಂಬಲ ಮತ್ತು ಗುರುತಿಸುವಿಕೆ ಆಗಬೇಕು.

ಕಾರ್ಮಿಕ ದಿನಾಚರಣೆಯು ಕಾರ್ಮಿಕರ ಕೊಡುಗೆಯನ್ನು ಗೌರವಿಸುವ ಜೊತೆಗೆ ಅವರ ಹಕ್ಕುಗಳಿಗಾಗಿ ಹೋರಾಡುವ ಒಂದು ಕರೆಯಾಗಿದೆ. ಭಾರತದಲ್ಲಿ ಕಾರ್ಮಿಕರ ಸ್ಥಿತಿಯನ್ನು ಸುಧಾರಿಸಲು ಸರ್ಕಾರ, ಕಾರ್ಮಿಕ ಸಂಘಗಳು ಮತ್ತು ಸಮಾಜದ ಎಲ್ಲ ವರ್ಗಗಳ ಸಹಕಾರ ಅಗತ್ಯ. ಕಾರ್ಮಿಕ ಕಾನೂನುಗಳ ಸರಳೀಕರಣವು ಒಂದು ಸಕಾರಾತ್ಮಕ ಹೆಜ್ಜೆಯಾಗಿದ್ದರೂ ಅವುಗಳ ಪರಿಣಾಮಕಾರಿ ಜಾರಿಯು ಕಾರ್ಮಿಕರಿಗೆ ಘನತೆಯ ಬದುಕನ್ನು ಒದಗಿಸಲು ಅತ್ಯಗತ್ಯ. ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ನಮ್ಮ ಬದ್ಧತೆಯನ್ನು ಪ್ರದರ್ಶಿಸಬೇಕಿದೆ.

### ಕೆಲಸದ ಸುರಕ್ಷತೆ

ಅನೇಕ ಕೈಗಾರಿಕೆಗಳಲ್ಲಿ ವಿಶೇಷವಾಗಿ ಗಣಿಗಾರಿಕೆ, ನಿರ್ಮಾಣ ಮತ್ತು ರಾಸಾಯನಿಕ ಕಾರ್ಖಾನೆಗಳಲ್ಲಿ ಕಾರ್ಮಿಕರು ಅಪಾಯಕಾರಿ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಾರೆ. ಅದರಿಂದ ಅಪಘಾತಗಳು ಮತ್ತು ಆರೋಗ್ಯ ಸಮಸ್ಯೆಗಳು ಸಾಮಾನ್ಯವಾಗಿವೆ.

### ವಲಸೆ ಕಾರ್ಮಿಕರ ಸಮಸ್ಯೆ

ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ವಲಸೆ ಕಾರ್ಮಿಕರ ಕಷ್ಟಗಳು ಎದ್ದುಕಾಣುವಂತಾಯಿತು. ಉದ್ಯೋಗ ಕಳೆದುಕೊಂಡು, ಆಹಾರ ಮತ್ತು ವಸತಿಯಿಲ್ಲದೆ ಅನೇಕರು ತಮ್ಮ ಗ್ರಾಮಗಳಿಗೆ ವಾಪಸಾಗಬೇಕಾಯಿತು.

### ಭಾರತದ ಕಾರ್ಮಿಕ ಕಾನೂನುಗಳು

ಭಾರತದಲ್ಲಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು ಹಲವಾರು ಕಾನೂನುಗಳಿವೆ. ಆದರೆ 2020ರಲ್ಲಿ ಸರ್ಕಾರವು ಕಾರ್ಮಿಕ ಕಾನೂನುಗಳನ್ನು ಸರಳೀಕರಿಸಲು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಪರಿಚಯಿಸಿತು. ಅದರ ವಿವರ ಇಂತಿದೆ.

ಕಾರ್ಮಿ ಕಸಂಹಿತೆ (ವೇತನ) 2019: ಕನಿಷ್ಠ ವೇತನ, ಸಕಾಲದಲ್ಲಿ ವೇತನ ಪಾವತಿ, ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಖಾತರಿಪಡಿಸುತ್ತದೆ.

ಔದ್ಯೋಗಿಕ ಸಂಬಂಧಗಳ ಸಂಹಿತೆ 2020: ಕಾರ್ಮಿಕ ಸಂಘಗಳ ರಚನೆ, ಸಾಮೂಹಿಕ ಒಪ್ಪಂದ, ಮತ್ತು ವಿವಾದ ಪರಿಹಾರಕ್ಕೆ ಸಂಬಂಧಿಸಿದ ನಿಯಮಗಳನ್ನು ಒಳಗೊಂಡಿದೆ.

ಸಾಮಾಜಿಕ ಭದ್ರತೆ ಸಂಹಿತೆ 2020: ಗ್ರಾಚ್ಯುಟಿ, ಉದ್ಯೋಗಿಗಳ ಭವಿಷ್ಯ ನಿಧಿ (ಪಿಎಫ್), ಆರೋಗ್ಯ ವಿಮೆ ಮತ್ತು ಇತರ ಸಾಮಾಜಿಕ ಭದ್ರತಾ ಯೋಜನೆಗಳನ್ನು ಒದಗಿಸುತ್ತದೆ.

ಕೆಲಸದ ಸ್ಥಳದ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ 2020: ಕೆಲಸದ ಸ್ಥಳದಲ್ಲಿ ಸುರಕ್ಷತೆ, ಆರೋಗ್ಯ ಮತ್ತು ಉತ್ತಮ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸುತ್ತದೆ.




### ಕಾನೂನು ಅನುಷ್ಠಾನದ ಸವಾಲುಗಳು

- ಕಾನೂನಿನ ಜಾರಿಯಲ್ಲಿ ದೌರ್ಬಲ್ಯ: ಅನೌಪಚಾರಿಕ ವಲಯದಲ್ಲಿ ಕಾನೂನುಗಳ ಅನುಷ್ಠಾನ ಕಡಿಮೆಯಾಗಿದೆ.
- ಜಾಗೃತಿಯ ಕೊರತೆ: ಅನೇಕ ಕಾರ್ಮಿಕರಿಗೆ ತಮ್ಮ ಕಾನೂನಾತ್ಮಕ ಹಕ್ಕುಗಳ ಬಗ್ಗೆ ತಿಳವಳಿಕೆ ಇಲ್ಲ.
- ವಲಸೆ ಕಾರ್ಮಿಕರ ಸಮಸ್ಯೆ: ವಲಸೆ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಇತರ ಸೌಲಭ್ಯಗಳು ಸಿಗುವುದು ಕಷ್ಟ.

ಕಾರ್ಮಿಕ ಸಂಘಗಳ ದುರ್ಬಲತೆ: ಆಧುನೀಕರಣ ಮತ್ತು ಖಾಸಗೀಕರಣದಿಂದಾಗಿ ಕಾರ್ಮಿಕ ಸಂಘಗಳ ಪ್ರಭಾವ ಕಡಿಮೆಯಾಗುತ್ತಿದೆ. ಇದರಿಂದ ಕಾರ್ಮಿಕರ ಸಾಮೂಹಿಕ ಒಪ್ಪಂದದ ಶಕ್ತಿ ದುರ್ಬಲವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248